ಸೊನ್ನೆ ಅಂಕದ ಗುಂಪುಗಳ ಬಗ್ಗೆಯೇ ಗಮನ ನೀಡುವುದು

ರಶ್ಮಿ ಪಲಿವಾಲ್

ಹಿನ್ನೆಲೆ

ಏಕಲವ್ಯ, ಇದು ಮಧ್ಯಪ್ರದೇಶದಲ್ಲಿ 1982ರಿಂದ ಶಾಲಾ ಶಿಕ್ಷಣದಲ್ಲಿ ಹೊಸದನ್ನು ಹುಡುಕಲು ತೊಡಗಿಸಿಕೊಂಡಿರುವ ಒಂದು ಸರ್ಕಾರೇತರ ಸಂಸ್ಥೆ. ಮಧ್ಯಪ್ರದೇಶದ ಆದಿವಾಸಿ ಭಾಗದ 34 ಹಳ್ಳಿಗಳಲ್ಲಿ 2015 – 19ರ ನಡುವೆ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಏಕಲವ್ಯ ನಡೆಸಿದ ಮಧ್ಯಪ್ರವೇಶದ ಬಗ್ಗೆ ಈ ಲೇಖನವು ವಿವರಿಸುತ್ತದೆ. ನಾಲ್ಕು ವರ್ಷಗಳ ನಮ್ಮ ಕೆಲಸದಿಂದ ಭಾಷೆ ಮತ್ತು ಗಣಿತೀಯ ಸಾಮರ್ಥ್ಯದ ಅಂಕಗಳು ಹೆಚ್ಚುತ್ತವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ನಮಗಿದ್ದ ಗುರಿಯಾಗಿತ್ತು. ಶಾಲೆಗೆ ಹಾಗೂ ಏಕಲವ್ಯ ಸಂಪನ್ಮೂಲ ಕೇಂದ್ರಕ್ಕೆ ಬಂದ ಕೆಲವು ಮಕ್ಕಳಲ್ಲಿ ಒಂದು ವರ್ಷವಾದರೂ ಗಳಿಸಿದ ಅಂಕಗಳು ಸೊನ್ನೆಯಲ್ಲಿಯೇ ಉಳಿದವು ಎಂದು ಕಂಡುಬಂದಿತಾದರೂ ತಕ್ಕಮಟ್ಟಿಗೆ ಉದ್ದೇಶಿತ ಗುರಿಯನ್ನು ಮುಟ್ಟಲಾಯಿತು. ಏಕಲವ್ಯ ಈ ವಿಷಯವನ್ನು ಹೇಗೆ ಪರಿಶೀಲಿಸಿತು ಮತ್ತು ಎಲ್ಲಾ ಮಕ್ಕಳು ಕಲಿಯಲು ಸಹಾಯ ಮಾಡಲು ಸಂಭಾವ್ಯ ಹೆಜ್ಜೆಗಳನ್ನು ಹೇಗೆ ಪರಿಭಾವಿಸಲಾಯಿತು ಎಂಬುದನ್ನು ಇಲ್ಲಿ ಚರ್ಚಿಸಲಾಗುತ್ತದೆ. ಏಕಲವ್ಯ ಸೇರಿದಂತೆ ಹಲವಾರು ಸಂಸ್ಥೆಗಳು ಮಕ್ಕಳನ್ನು ಕಲಿಯುವಲ್ಲಿ ಸಮರ್ಥರನ್ನಾಗಿಸುವೆಡೆ ಹೆಚ್ಚು ಆಶಾಭಾವನೆ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತವೆ. ನಾವು ಹೊಸದಾದ ಸಾಮಗ್ರಿಗಳು, ಚಟುವಟಿಕೆಗಳು ಮತ್ತು ಪದ್ಧತಿಗಳನ್ನು ಅಭಿವೃದ್ಧಿಪಡಿಸಲು; ಶಿಕ್ಷಕರು ಮತ್ತು ಶಿಕ್ಷಣತಜ್ಞರೊಂದಿಗೆ ತರಬೇತಿಗಳು, ಕಾರ್ಯಾಗಾರಗಳು ಮತ್ತು ಪುನರ್ಮನನ ಸಭೆಗಳನ್ನು ನಡೆಸಲು; ಮಕ್ಕಳಲ್ಲಿನ ಕಲಿಕೆಯ ಪರ್ಯಾಯ ಮತ್ತು ಸರ್ವಾಂಗೀಣ ಮಾಪನದ ರೀತಿಗಳನ್ನು ಹುಡುಕಲು ಹೆಚ್ಚು ಗಮನಹರಿಸುತ್ತೇವೆ. ಜೊತೆಗೆ ಅಂಕಿ ಸಂಖ್ಯೆಗಳನ್ನು ಸರಿಯಾಗಿ ಸಂಗ್ರಹಿಸುವುದು, ನಿರ್ವಹಿಸುವುದು ಮತ್ತು ಅಧ್ಯಯನ ಮಾಡುವುದರಿಂದ ಹೆಚ್ಚಿನ ಪರಿಣಾಮಕ್ಕೆ ನಮ್ಮ ಪರಿಶ್ರಮಗಳನ್ನು ಹೊಂದಿಕೊಳ್ಳುವಲ್ಲಿ ಆಗುವ ಅನುಕೂಲತೆಗಳನ್ನು ಹಿಂದಿನ ಐದು ವರ್ಷಗಳಲ್ಲಿ ನಾನು ಅರಿತುಕೊಂಡಿದ್ದೇನೆ.

ವಿಧಾನ

ನಾನು ಜೆಮ್‌ಶೆಡ್‌ಜೀ ಟಾಟಾ ಟ್ರಸ್ಟ್‌ನ ಅಡಿಯಲ್ಲಿ ಚಿಂದ್ವಾರಾ ಜಿಲ್ಲೆಯ ತಾಮಿಯಾ ಪ್ರದೇಶದಲ್ಲಿ ಅಕ್ಟೋಬರ್ 2015ರಿಂದ ಮಾರ್ಚ್ 2019ರವರೆಗೆ ಏಕಲವ್ಯ ಅವರ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಯೋಜನೆಯಲ್ಲಿ ಭಾಗವಹಿಸಿದ್ದೆ. 34 ಹಳ್ಳಿಗಳಲ್ಲಿ, 37 ಪ್ರಾಥಮಿಕ ಶಾಲೆಗಳ ಸುಮಾರು ಮೂರು ಸಾವಿರದ ಐದು ನೂರು (3500) ಮಕ್ಕಳನ್ನು ಹಾಗೂ 15 ಮಾಧ್ಯಮಿಕ ಶಾಲೆಗಳ ಸುಮಾರು 1800 ಮಕ್ಕಳನ್ನು ತಲುಪುವಂತೆ ಇದನ್ನು ನಡೆಸಲಾಯಿತು. ಏಕಲವ್ಯದ 6 ಜನರ ಪ್ರಮುಖ ತಂಡವು 62 ಜನರ ಕ್ಷೇತ್ರ ತಂಡದೊಡನೆ 49 ಸ್ಥಳಗಳಲ್ಲಿ ಪ್ರಾಥಮಿಕ ಹಂತದಲ್ಲಿ ಶಾಲೆಯಿಂದ ಹೊರತಾದ ಬೆಂಬಲ ಕೇಂದ್ರಗಳನ್ನು 2 ಗಂಟೆಗಳ ಕಾಲ ನಡೆಸಲು ಹಾಗೂ ಚಾಲ್ತಿಯಲ್ಲಿರುವ ಗ್ರಂಥಾಲಯಗಳು, ಚಟುವಟಿಕೆ ಕೇಂದ್ರಗಳು, ಬೋಧನಾ ಕಲಿಕಾ ಸಾಮಗ್ರಿಗಳ ಉಪಯೋಗಗಳು ಹಾಗೂ ಶಿಕ್ಷಕರ ಅಭಿವೃದ್ಧಿ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಪ್ರತಿವಾರವೂ ಶಾಲೆಗೆ ಬೆಂಬಲ ನೀಡುವುದಕ್ಕೆ ಕೆಲಸ ಮಾಡುತ್ತಿತ್ತು.

ಶಿಕ್ಷಾ ಪ್ರೋತ್ಸಾಹನ್ ಕೇಂದ್ರ (Shiksha Protsahan Kendra -SPKs) ಎಂದು ಕರೆಯಲ್ಪಡುವ ಏಕಲವ್ಯದ ಶಾಲೆಯಾಚೆಯ ಕೇಂದ್ರಗಳು ಮತ್ತು ಶಾಲೆಗಳು ಎರಡೂ ಕಡೆಯೂ ಪ್ರತೀ ತಿಂಗಳ ಮಟ್ಟದಲ್ಲಿ ಮಗುವಿನ ಹಾಜರಾತಿಯನ್ನು ಕಲೆಹಾಕಿ ಪರಿಶೀಲಿಸುವುದರ ಮೂಲಕ ಈ ಕೆಲಸದ ಪರಿಣಾಮವನ್ನು ಗಮನಿಸುತ್ತಿದ್ದೆವು. ಕಲಿಕಾ ಮಟ್ಟದ ಮೇಲಿನ ಪರಿಣಾಮಗಳನ್ನು 34ರಲ್ಲಿ 17 ಹಳ್ಳಿಗಳಲ್ಲಿ ನಡೆಸಿದ ಮಾದರಿ ಅಧ್ಯಯನದ ಮೂಲಕ ಅಭ್ಯಸಿಸಲಾಯಿತು. ಮೂರು ಮತ್ತು ಐದನೇ ತರಗತಿಯ ಮಕ್ಕಳ ಕಲಿಕಾ ಮಾಪನ ಮಾಡಲಾಯಿತು.

ಮಕ್ಕಳು ಗಳಿಸಿದ ಅಂಕಗಳಲ್ಲಿ ವರ್ಷ ಕಳೆದಂತೆ ಅಭಿವೃದ್ಧಿ ಇದೆಯೇ ಎಂಬುದನ್ನು ಗಮನಿಸುವುದು ಮೊದಲಿನ ಮೂಲ ಯೋಜನೆಯಾಗಿತ್ತು. ಏಕಲವ್ಯದ ನಿರಂತರ ಬೆಂಬಲವು ಮಕ್ಕಳಿಗೆ, ಶಿಕ್ಷಕರಿಗೆ ಹಾಗೂ ಪೋಷಕರಿಗೆ ದೊರಕಿದಾಗ ಪ್ರತಿ ತಂಡದ ವಿದ್ಯಾರ್ಥಿಗಳ ಕಲಿಕಾಮಟ್ಟದಲ್ಲಿ ಹೆಚ್ಚಳ ಆಗಿರಬೇಕೆಂಬುದು ಊಹೆಯಾಗಿತ್ತು. ಅಂದರೆ ಫೆಬ್ರವರಿ 2016ರಲ್ಲಿ ಮೂರನೇ ತರಗತಿಯಲ್ಲಿದ್ದ ಮಗುವಿಗೆ ಕೇವಲ ಕೆಲವೇ ತಿಂಗಳ ಬೆಂಬಲ ದೊರೆತಿತ್ತು, 2017ರಲ್ಲಿ ಮೂರನೇ ತರಗತಿಯಲ್ಲಿದ್ದ ಮಗುವಿಗೆ ಒಂದು ವರ್ಷದಷ್ಟು ಹಾಗೂ 2018ರಲ್ಲಿ ಮೂರನೇ ತರಗತಿಯಲ್ಲಿದ್ದ ಮಗುವಿಗೆ ಎರಡು ವರ್ಷಗಳಷ್ಟು ಹಾಗೂ 2019ರಲ್ಲಿ ಮೂರನೇ ತರಗತಿಯಲ್ಲಿದ್ದ ಮಗುವಿಗೆ ಮೂರು ವರ್ಷಗಳಷ್ಟು ಬೆಂಬಲ ದೊರೆತಿರುತ್ತದೆ. ಮೂರನೇ ತರಗತಿಯ ಎಲ್ಲ ಮಕ್ಕಳು ಆ ತರಗತಿ ಮುಗಿಸುವ ಹೊತ್ತಿಗಾದರೂ ಹಿಂದಿ ಮತ್ತು ಗಣಿತದಲ್ಲಿ ಒಂದನೇ ತರಗತಿಯಷ್ಟು ಸಾಮರ್ಥ್ಯಗಳನ್ನು ಗಳಿಸಿರಬೇಕು ಮತ್ತು 5ನೇ ತರಗತಿಯ ಮಕ್ಕಳು ಮೂರನೇ ತರಗತಿಯ ಮಟ್ಟದಷ್ಟಾದರೂ ಮೂಲ ಹಿಂದಿ ಮತ್ತು ಗಣಿತದ ಸಾಮರ್ಥ್ಯ ಸಾಧಿಸಬೇಕು ಎಂಬುದು ನಮ್ಮ ಧ್ಯೇಯವಾಗಿದ್ದಿತು. ಪ್ರತಿವರ್ಷದ ಫೆಬ್ರವರಿ – ಮಾರ್ಚ್‌ನಲ್ಲಿ ಮೌಖಿಕ ಮತ್ತು ಬರವಣಿಗೆ ರೂಪದ ಅಭ್ಯಾಸಗಳನ್ನು ಕೊಡುವ ಮೂಲಕ ಕಲಿಕೆಯ ಮಟ್ಟವನ್ನು 'ಏಕಲವ್ಯ'ದ ಕೇಂದ್ರ ತಂಡ ಹಾಗೂ ಕೆಲವು ಕ್ಷೇತ್ರ ತಂಡದ ಸದಸ್ಯರು ಕೂಡಿ ಮಾಪನ ಮಾಡುತ್ತಿದ್ದರು. ಪ್ರತಿ ವರ್ಷವೂ ಮೂರನೇ ತರಗತಿಯ ಸುಮಾರು 150 ಮಕ್ಕಳು ಹಾಗೂ 5ನೇ ತರಗತಿಯ ಸುಮಾರು 150 ಮಕ್ಕಳನ್ನು ಪರೀಕ್ಷೆ ಮಾಡಲಾಯಿತು. ಎಲ್ಲ ವರ್ಷಗಳಲ್ಲಿ ಪರೀಕ್ಷೆಗೆ ವಿವಿಧ ತಂಡಗಳಿಗೆ ಉಪಯೋಗಿಸಿದ ಪರೀಕ್ಷಾ ಪತ್ರಿಕೆಯು ಒಂದೇ ಆಗಿದೆ.

ಎಲ್ಲ ಮಕ್ಕಳು ಕಲಿತಿದ್ದಾರಾ?

ನಮ್ಮ ಫಲಿತಗಳು
ಸರಾಸರಿ ಅಂಕಗಳು

ಕೆಳಗೆ ತೋರಿಸಿರುವ ಸರಾಸರಿ ಅಂಕಗಳು ಆಧಾರರೇಖೆ (2016), ಮಧ್ಯರೇಖೆ (2017), ಕೊನೆಯ ರೇಖೆ – 1 (2018) ಮತ್ತು ಕೊನೆಯ ರೇಖೆ – 2 (2019) ಅಧ್ಯಯನಗಳ ನಾಲ್ಕು ಅನುಕ್ರಮವಾದ ಗುಂಪುಗಳ 3 ಮತ್ತು 5ನೇ ತರಗತಿಯ ಮಕ್ಕಳ ಫಲಿತಾಂಶವನ್ನು ತೋರಿಸುತ್ತದೆ. ಸರಾಸರಿ ಅಂಕಗಳಲ್ಲಿ ಹೆಚ್ಚಳವಾಗಿರುವುದು ನಾಲ್ಕು ವರ್ಷದಲ್ಲಿ ಸಾಧನೆಯು ಉತ್ತಮಗೊಂಡಿದೆ ಎಂಬುದನ್ನು ನಮಗೆ ತೋರಿಸುತ್ತದೆ.

ಗಣಿತ ತರಗತಿ	ಶೇಕಡಾವಾರು ಸರಾಸರಿ ಅಂಕ	ವಿದ್ಯಾರ್ಥಿಗಳ ಸಂಖ್ಯೆ
ಕೊನೆಯ ರೇಖೆ 2018-19	68%	158
ಕೊನೆಯ ರೇಖೆ 2017-18	53%	141
ಮಧ್ಯರೇಖೆ 2016-17	42%	161
ಆಧಾರರೇಖೆ 2015-16	33%	161

ಗಣಿತ ತರಗತಿ	ಶೇಕಡಾವಾರು ಸರಾಸರಿ ಅಂಕ	ವಿದ್ಯಾರ್ಥಿಗಳ ಸಂಖ್ಯೆ
ಕೊನೆಯ ರೇಖೆ 2018-19	45%	188
ಕೊನೆಯ ರೇಖೆ 2017-18	34%	165
ಮಧ್ಯರೇಖೆ 2016-17	31%	165
ಆಧಾರರೇಖೆ 2015-16	28%	152

ಭಾಷಾ ತರಗತಿ	ಶೇಕಡಾವಾರು ಸರಾಸರಿ ಅಂಕ	ವಿದ್ಯಾರ್ಥಿಗಳ ಸಂಖ್ಯೆ
ಕೊನೆಯ ರೇಖೆ 2018-19	38%	154
ಕೊನೆಯ ರೇಖೆ 2017-18	34%	136
ಮಧ್ಯರೇಖೆ 2016-17	30%	161
ಆಧಾರರೇಖೆ 2015-16	18%	151

ಭಾಷಾ ತರಗತಿ	ಶೇಕಡಾವಾರು ಸರಾಸರಿ ಅಂಕ	ವಿದ್ಯಾರ್ಥಿಗಳ ಸಂಖ್ಯೆ
ಕೊನೆಯ ರೇಖೆ 2018-19	59%	191
ಕೊನೆಯ ರೇಖೆ 2017-18	49.4%	162
ಮಧ್ಯರೇಖೆ 2016-17	49.2%	164
ಆಧಾರರೇಖೆ 2015-16	41.6%	141

ಸೊನ್ನೆ ಅಂಕೆಯ ಮಕ್ಕಳು

ಪ್ರತಿ ಪರೀಕ್ಷೆಯ ಪತ್ರಿಕೆಗಳಲ್ಲೂ ಬೇರೆಬೇರೆ ಅಂಕಗಳನ್ನು– 0, 1, 2, 3, 4 – ಪಡೆದ ಮಕ್ಕಳ ಶೇಕಡಾವಾರು ಪ್ರಗತಿಯನ್ನು ಗಮನಿಸಿದೆವು. ನಾಲ್ಕು ವರ್ಷಗಳಲ್ಲಿ 5ನೇ ತರಗತಿಯ ಗಣಿತ ಹಾಗೂ ಸ್ವಲ್ಪಮಟ್ಟಿಗೆ 5ನೇ ತರಗತಿಯ ಭಾಷೆಯನ್ನು ಹೊರತುಪಡಿಸಿ ಸೊನ್ನೆ ಅಂಕ ಗಳಿಸುವ ಮಕ್ಕಳ ಶೇಕಡಾವಾರು ಸಂಖ್ಯೆ ಸುಮಾರಾಗಿ ಕಡಿಮೆಗೊಂಡಿತ್ತು. ಉದಾಹರಣೆಗೆ 3ನೇ ತರಗತಿಯ ಹಿಂದಿಯಲ್ಲಿ 65 % ಮಕ್ಕಳು 2016ರಲ್ಲಿ ಸೊನ್ನೆ ಗಳಿಸಿದ್ದರೆ 2017ರಲ್ಲಿ 50 % ಮತ್ತು 2018ರಲ್ಲಿ 45 % ಮತ್ತು 2019ರಲ್ಲಿ 39 % ಇದ್ದರು. ಈ ನಾಲ್ಕು ವರ್ಷಗಳಲ್ಲಿ ಮೂರನೇ ತರಗತಿಯ ತಂಡಗಳಲ್ಲಿ ಗಣಿತದಲ್ಲಿ ಸೊನ್ನೆ ಅಂಕ ಪಡೆದ ಮಕ್ಕಳ ಶೇಕಡಾವಾರು 30, 27, 18 ಮತ್ತು 9 ಆಗಿದ್ದಿತು. ಒಟ್ಟಾರೆ ಗಮನಿಸಿದ ದತ್ತಾಂಶಗಳು ತೋರಿಸಿದಂತೆ ಈ ಯೋಜನೆಯು ಮುಂದುವರಿದ ಹಾಗೆಯೇ ಪ್ರತಿವರ್ಷವೂ ಮಕ್ಕಳ ಕಲಿಕೆಯಲ್ಲಿ ಏರಿಕೆಯಾಗುತ್ತಿದ್ದು, ಹೆಚ್ಚು ಹೆಚ್ಚು ಮಕ್ಕಳು ಕಲಿಯುತ್ತಿದ್ದರು.

ಕಲಿಯದೇ ಇರುವ ಮಕ್ಕಳ ಬಗ್ಗೆ ಕಲಿಯುವುದು

ಮಧ್ಯರೇಖೆಯ ಅಧ್ಯಯನದ ಫಲಿತಾಂಶಗಳು ದೊರೆತ ನಂತರ ಪರಿಶೀಲಿಸಿ ಸಾಕಷ್ಟು ಮಕ್ಕಳು ೦ ಪಡೆದದ್ದನ್ನು ಗಮನಿಸಿದೆವು ಹಾಗೂ ಅವರ ಬಗ್ಗೆ ನಾವು ಹೆಚ್ಚು ತಿಳಿಯಲು ನಿರ್ಧರಿಸಿದೆವು. ೨೦16ರ ಆಧಾರ ರೇಖೆಯ ಅಧ್ಯಯನದಲ್ಲಿ ೦ ಅಂಕ ಪಡೆದ ಮಕ್ಕಳಿಗೆ ಈ ಪರೀಕ್ಷೆಗಳನ್ನು ಪುನರಾವರ್ತಿಸಲು ನಿರ್ಧರಿಸಿದೆವು. ಈ ಮಕ್ಕಳು 5 ಮತ್ತು 7ನೇ ತರಗತಿಯನ್ನು ಮುಟ್ಟಿದರು. ಉದಾಹರಣೆಗೆ ಮಾರ್ಚ್ ೨೦16ರಲ್ಲಿ ನಡೆದ ಆಧಾರ ರೇಖೆಯ ಅಧ್ಯಯನದಲ್ಲಿ ೩ನೇ ತರಗತಿಯ ೯೮ ಮಕ್ಕಳು ಸೊನ್ನೆ ಪಡೆದಿದ್ದರು, 2017 ನವೆಂಬರ್ ಹೊತ್ತಿಗೆ ಈ ಮಕ್ಕಳಲ್ಲಿ ೮೮ ಮಕ್ಕಳು ಅದೇ ಪ್ರಶ್ನೆಪತ್ರಿಕೆಯಲ್ಲಿ ಪರೀಕ್ಷೆ ತೆಗೆದುಕೊಂಡರು (ಆ ಸಮಯದಲ್ಲಿ ಅವರು 5ನೇ ತರಗತಿಯಲ್ಲಿದ್ದರು). ಐವತ್ತೆಂಟು ಮಕ್ಕಳು ತಮ್ಮ ಕಲಿಕೆಯ ಮಟ್ಟದಲ್ಲಿ ಸುಧಾರಿಸಿದ್ದರು ಹಾಗೂ ಹೆಚ್ಚು ಅಂಕ ಪಡೆದರು. ಆದರೆ ಅವರಲ್ಲಿನ ಮೂವತ್ತು ಮಕ್ಕಳು ಮತ್ತೆ ೦ ಅಂಕ ಪಡೆದರು.

ಈ ಅಂಶಗಳನ್ನು ಪರಿಗಣಿಸಿ ಶಾಲೆ ಮತ್ತು ಎಸ್‌ಪಿಕೆಗೆ ಒಂದು ವರ್ಷದ ಕಾಲ ಬಂದರೂ ಕೂಡ ಯಾವುದೇ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲಾಗದ ಮಕ್ಕಳ ಪಟ್ಟಿಯನ್ನು ಮಾಡಿದೆವು. ನಾವು ಅವರ ಹಾಜರಾತಿಯನ್ನು ಗಮನಿಸಿದೆವು. ಪರಾಮರ್ಶೆಯ ಕೆಲವು ಉದಾಹರಣೆಗಳು ಇಲ್ಲಿವೆ:

ಅಂಕದಲ್ಲಿ ಮುಂದುವರೆಯದವರ ಪಟ್ಟಿ (೦ ಇಂದ ೦ ಅಂಕೆಗೆ ೨೦16 ರಿಂದ ೨೦17)

2016ರಲ್ಲಿ ೦ ಅಂಕ ಗಳಿಸಿದ್ದ ವಿದ್ಯಾರ್ಥಿ	2015-16ರ ಶಾಲೆ ಹಾಜರಾತಿ	2015-16ರ ಎಸ್‌ಪಿಕೆ ಹಾಜರಾತಿ	2016-17ರ ಶಾಲೆ ಹಾಜರಾತಿ	2016-17ರ ಎಸ್‌ಪಿಕೆ ಹಾಜರಾತಿ	ಮರು ಪರೀಕ್ಷೆಯಲ್ಲಿ ೦ (ಅಕ್ಟೋ 2017)
ಅಮಿತಾ	80%	75%	79%	82%	ಗಣಿತ
ಸೋನಂ	68%	61%	59%	66%	ಗಣಿತ
ಅಮೃತ	70%	63%	67%	64%	ಗಣಿತ
ರಾಣಿ	62%	55%	66%	74%	ಗಣಿತ
ಮನಿಷ್	73%	68%	56%	64%	ಗಣಿತ
ಜಯಕಿಶನ್	73%	67%	NA	NA	ಎರಡರಲ್ಲೂ

ವಿಷಯ ಅಧ್ಯಯನಗಳು (Case studies)

ನಾವು ಕಂಡುಕೊಂಡ ಫಲಿತಗಳ ಆಧಾರದ ಮೇಲೆ ಮಕ್ಕಳನ್ನು, ಅವರ ಪಾಲಕರು ಹಾಗೂ ಶಿಕ್ಷಕರನ್ನು ಅವರ ಹಳ್ಳಿಗಳಲ್ಲಿಯೇ ಭೇಟಿ ಮಾಡಿದೆವು. ಹೀಗೆ ಮೂವತ್ತು ಮಕ್ಕಳ ಬಗ್ಗೆ ಚರ್ಚಿಸಿ ಮನೆಯಲ್ಲಿ, ಶಾಲೆಯಲ್ಲಿ ಮತ್ತು ಎಸ್‌ಪಿಕೆಯಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ದಾಖಲಿಸಲಾಯಿತು. ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್(TISS)ನ ನಾಲ್ಕು ವಿದ್ಯಾರ್ಥಿಗಳು ಅವರ ಗ್ರಾಮೀಣ ಪ್ರಾಯೋಗಿಕ ಭಾಗವಾಗಿ ನಮ್ಮ ತಂಡವನ್ನು ಮಾರ್ಚ್ ೨೦18ರ ಕೊನೆಯ ವಾರದಲ್ಲಿ ಸೇರಿಕೊಂಡು ಅಧ್ಯಯನಗಳಲ್ಲಿ ಸಹಾಯ ಮಾಡಿದರು. ಕೆಲವು ಉದಾಹರಣೆಗಳನ್ನು ಕೆಳಗೆ ನೀಡಿದೆ.

ವಿಷಯ ಅಧ್ಯಯನ 1

ಲಕ್ಷ್ಮಿಯ ಶಿಕ್ಷಕರ ಪ್ರಕಾರ ಅವಳು ತನ್ನ ಬಗ್ಗೆ ಕೇವಲ ಕೆಲವು ವಿಷಯಗಳನ್ನಷ್ಟೇ ಬರೆಯಬಲ್ಲಳು. ತನ್ನ ಹೆಸರು, ತನ್ನ ಪಾಲಕರ ಹೆಸರು, ಹಳ್ಳಿಯ ಹೆಸರು ಹೀಗೆ. ಅವಳು ಚಿತ್ರಗಳನ್ನು ಸರಿಯಾಗಿ ಗುರುತಿಸಬಲ್ಲಳು. ಗುಣಿತಾಕ್ಷರಗಳನ್ನೊಳಗೊಂಡ ಅಕ್ಷರಗಳನ್ನು ಬರೆಯಲು ಕಷ್ಟಪಡುತ್ತಾಳೆ. ಗಣಿತದಲ್ಲಿ ಅವಳು ನೂರರವರೆಗೆ ಎಣಿಸಬಲ್ಲಳು ಮತ್ತು ಸಾಮಾನ್ಯ ಕೂಡುವುದು ಮತ್ತು ಕಳೆಯುವುದನ್ನು ಮಾಡಬಲ್ಲಳು. ಅವಳ ಎಸ್‌ಪಿಕೆ ಶಿಕ್ಷಕಿಯು ನಮಗೆ ಹೇಳಿದ್ದೆಂದರೆ ಅವಳು ನಿಯಮಿತವಾಗಿ ತರಗತಿಗೆ ಬರುತ್ತಿದ್ದಾಳೆ ಹಾಗೂ ೮೨ % ಹಾಜರಾತಿ ಇದೆ. ಮಕ್ಕಳನ್ನು ಅವರ ತಾಯಿ ಒಬ್ಬರೇ ಬೆಳೆಸುತ್ತಿದ್ದಾರೆ ಹಾಗೂ ಅವರೊಬ್ಬರೇ ಮನೆಯಲ್ಲಿ ಸಂಪಾದಿಸುವ ವ್ಯಕ್ತಿ. ಲಕ್ಷ್ಮಿಗೆ ಕೇವಲ ಒಂಬತ್ತು ತಿಂಗಳಾಗಿದ್ದಾಗ ಅವಳ ತಂದೆ ತೀರಿಕೊಂಡರು. ಅವಳ ತಾಯಿ ಸೋನಂ ಆಗಾಗ ಹತ್ತಿರದ ನಗರಗಳಿಗೆ ಉದಾಹರಣೆಗೆ, ಪಿಪಾರಿಯಾಗೆ ಕೂಲಿ ಕೆಲಸಕ್ಕಾಗಿಯೂ ಹೋಗುತ್ತಾರೆ. ಹೆಚ್ಚಿನ ದುಡಿಮೆಗಾಗಿ ಒಣಗಿಸಿದ ಕಾಡು ಇಪ್ಪೆ (ಮಾಹುವ) ಮಾರುತ್ತಾರೆ. ಆಕೆಯು ಮಕ್ಕಳನ್ನು ಕಾಡಿಗೆ ಇಪ್ಪೆಯನ್ನು ಸಂಗ್ರಹಿಸಲು ಕರೆದೊಯ್ಯದಂತೆ ಬಹಳಷ್ಟು ಗಮನ ನೀಡುತ್ತಾರೆ. ಆಕೆಯು ಕೆಲಸಕ್ಕೆ ಹೋಗಿದ್ದಾಗ ಲಕ್ಷ್ಮಿ ಮತ್ತು ಒಂಬತ್ತನೆ ತರಗತಿಯಲ್ಲಿ ಓದುತ್ತಿರುವ ಅವಳ ಅಣ್ಣ ಇಬ್ಬರೇ ಮನೆಯಲ್ಲಿ ಇರುತ್ತಾರೆ, ತಾವೇ ಅಡುಗೆ ಮಾಡಿಕೊಳ್ಳುತ್ತಾರೆ. ಅವಳ ತಾಯಿ ಹೇಳುವಂತೆ ಲಕ್ಷ್ಮಿಯು ಬೆಳಗಿನ ಐದು ಗಂಟೆಗೇ ಎದ್ದು ಎರಡು ಗಂಟೆಗಳ ಕಾಲ ಓದುತ್ತಾಳೆ. ನಂತರ ಎಸ್‌ಪಿಕೆ ತರಗತಿಗೆ ಮತ್ತು ಶಾಲೆಗೆ ಹೋಗುತ್ತಾಳೆ.

ಲಕ್ಷ್ಮಿಯ ತಾಯಿಯು ನಮಗೆ ಮತ್ತೊಂದು ವಿಷಯವನ್ನು ತಿಳಿಸಿದರು. ಅವರ ಮಗನು ೯ನೇ ತರಗತಿಯಲ್ಲಿ ಓದುತ್ತಿದ್ದರೂ ಆತನು ಕಲಿಕೆಯಲ್ಲಿ ಹಿಂದಿದ್ದಾನೆ ಮತ್ತು ಸರಿಯಾಗಿ ಓದಲಾಗಲೀ ಅಥವಾ ಬರೆಯುವುದಕ್ಕಾಗಲೀ ಬರುವುದಿಲ್ಲ. ಪ್ರಾಥಮಿಕ ಶಾಲೆಯ ಶಿಕ್ಷಕರು ಆಲಸಿಯಾಗಿದ್ದು ಕೆಲವೊಮ್ಮೆ ಮದ್ಯ ಸೇವಿಸಿ ಶಾಲೆಗೆ ಬರುತ್ತಾರೆ ಎಂದೂ ಆಕೆ ತಿಳಿಸಿದರು. ಈಗ ಇಷ್ಟಾದರೂ ಕಲಿತಿರುವುದು ಎಸ್‌ಪಿಕೆ ತರಗತಿಗಳಿಂದ ಮಾತ್ರ, ಇದರಿಂದಾಗಿ ಅವಳ ಶೈಕ್ಷಣಿಕ ಸಾಧನೆ ಉತ್ತಮಗೊಂಡಿದೆ ಎಂದು ತಿಳಿಸಿದರು.

ವಿಷಯ ಅಧ್ಯಯನ 2

ಸುನಿಲ್‌ನು ಶಾಲೆಗೆ ಸರಿಯಾಗಿ ಬರುವುದಿಲ್ಲ. ಅವನು 4ನೇ ತರಗತಿಗೆ ಕೆಲ ಬಾರಿಯಷ್ಟೇ ಬಂದಿದ್ದನು, 5ನೇ ತರಗತಿಯಲ್ಲಿ ಮತ್ತೂ ಕಡಿಮೆ. ಐದನೇ ತರಗತಿಯಲ್ಲಿ ಸುನಿಲ್ ಈಗ ಇದ್ದರೂ

ಕೂಡ ಅವನಿಗೆ ಅಕ್ಷರಗಳನ್ನು ಗುರುತಿಸುವುದಾಗಲೀ ಸಂಖ್ಯೆಗಳನ್ನು ಗುರುತಿಸುವುದಾಗಲೀ ಸಾಧ್ಯವಾಗುತ್ತಿಲ್ಲ. ಅವನ ಪರೀಕ್ಷೆಯ ಪತ್ರಿಕೆಗಳಲ್ಲಿ ತನ್ನ ಪೋಷಕರ ಹೆಸರುಗಳು ಮತ್ತು ದಿನಾಂಕವನ್ನು ಸರಿಯಾಗಿ ಬರೆಯಲು ಸಹ ಅವನಿಗೆ ಸಾಧ್ಯವಾಗುತ್ತಿಲ್ಲ. ಅವನ ಶಿಕ್ಷಕರು ಹೇಳುವಂತೆ ಅವನ ಕಲಿಕೆಯ ಮಟ್ಟ ಒಂದನೇ ತರಗತಿಯ ವಿದ್ಯಾರ್ಥಿಯ ಮಟ್ಟದಲ್ಲದೆ. ಆದರೆ ಅವನು ಚಿತ್ರಗಳನ್ನು ಸೃಜನಶೀಲವಾಗಿಯೂ ಹಾಗೂ ಉತ್ತಮವಾಗಿಯೂ ಚಿತ್ರಿಸುತ್ತಾನೆ. ಸುನಿಲನ ಪೋಷಕರು ಹೇಳುವಂತೆ ಅವರು ಅವನನ್ನು ಶಾಲೆಗೆ ಕರೆದುಕೊಂಡು ಹೋಗುತ್ತಾರೆ. ಆದರೆ ಅವನು ಮಧ್ಯದಲ್ಲಿಯೇ ಓಡಿಹೋಗಿ ತನ್ನ ಸ್ನೇಹಿತರೊಂದಿಗೆ ಆಟವಾಡಲು ಸೇರುತ್ತಾನೆ ಹಾಗೂ ಬಲವಂತ ಮಾಡಿದರೆ ಬಹಳ ಆಕ್ರಮಣಶೀಲನಾಗಿ ವರ್ತಿಸುತ್ತಾನೆ.

ಸುನಿಲ್‌ನು ಇತರೆ ಹಿಂದುಳಿದ ಜಾತಿಯ ಯಾದವ ಕುಟುಂಬದವನು. ಹಳ್ಳಿಯ ಇತರೆ ಪರಿಶಿಷ್ಟ ಪಂಗಡದ ಜನರಿಗಿಂತ ಆರ್ಥಿಕವಾಗಿ ಉತ್ತಮವಾಗಿರುವ ಕುಲದವರು ಅವರು. ಸುನಿಲನು ಒಂದು ಉತ್ತಮ ಮನೆಯಲ್ಲಿ ವಾಸಮಾಡುತ್ತಾನೆ ಹಾಗೂ ಕುಟುಂಬವು ಜಾನುವಾರುಗಳನ್ನು ಹೊಂದಿದೆ. ಅವರ ಆದಾಯ ಮೂಲವು ಹಾಲು ಮಾರುವುದರಿಂದ ಬರುತ್ತದೆ. ಅವರ ಮನೆಯಲ್ಲಿ ಕೆಲಸಗಳನ್ನು ಹಂಚಿಕೊಳ್ಳುತ್ತಾರೆ – ಅವರ ತಾಯಿಯು ಎಮ್ಮೆಯ ಹಾಲು ಕರೆಯುವ ಜವಾಬ್ದಾರಿ ಹೊಂದಿದ್ದಾರೆ, ಸುನಿಲ ಮತ್ತು ಅವನ ಅಣ್ಣ ಆಕಳುಗಳಿಗೆ ಆಹಾರ ನೀಡುವ ಜವಾಬ್ದಾರಿ, ಅವರ ತಂದೆ ಪಿಪಾರಿಯಾಗೆ ಹೋಗಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರುವ ಕೆಲಸ ಮಾಡುತ್ತಾರೆ. ಈ ಕುಟುಂಬವು ತಿಂಗಳಿಗೆ ಸುಮಾರು ಹತ್ತು ಸಾವಿರದಷ್ಟು ಆದಾಯ ಹೊಂದಿದ್ದು, ಸುತ್ತಮುತ್ತಲಿನ ಇತರ ಕುಟುಂಬಗಳು ಕೃಷಿಯಿಂದ ಗಳಿಸುವ ಆದಾಯಕ್ಕಿಂತಲೂ ಎರಡರಷ್ಟಿದೆ. ಅವನು ಹಾಗೂ ಅವನ ಅಣ್ಣ ಜಯರಾಮ್ ಕಾಡಿಗೆ ಇಪ್ಪೆ/ಮಾಹುವಾ, ತೆಂಡು(ಅಬನಾಸಿ) ಮತ್ತು ಹುಣಸೆಹಣ್ಣು ಸಂಗ್ರಹಿಸಲು ಹೋಗುತ್ತಾರೆ. ಇವನ್ನು ಅವರು ಮಾರುಕಟ್ಟೆಯಲ್ಲಿ ಕೆಜಿಗೆ ಮೂವತ್ತು– ನಲವತ್ತು ರೂಪಾಯಿಗೆ ಮಾರುತ್ತಾರೆ. ಈ ಕುಟುಂಬವು ಭೂಮಿಯನ್ನು ಸಹ ಹೊಂದಿದ್ದು, ನಿಯಮಿತವಾದ ಆದಾಯ ಬರುತ್ತದೆ.

ಸುನಿಲನ ಸ್ನೇಹಿತರು ಹೇಳುವಂತೆ ಅವರಿಗೆ ಶಿಕ್ಷಣವು ಮುಖ್ಯವಾಗಿದೆ. ಶಿಕ್ಷಕರು ಚೆನ್ನಾಗಿ ಪಾಠ ಮಾಡುತ್ತಾರೆ ಮತ್ತು ಅವರನ್ನು ಹೊಡೆಯುವುದಿಲ್ಲ. ಅವರಿಗೆ ಓದಿನಲ್ಲಿ ಆಸಕ್ತಿ ಇಲ್ಲದ್ದರಿಂದ ಅವರು ಶಾಲೆಗೆ ಬರುವುದಿಲ್ಲ ಎಂದು ಹೇಳಿದರು. ಸುನಿಲ್‌ನ ಅಣ್ಣ 7 ಕಿಲೋಮೀಟರ್ ದೂರದಲ್ಲಿರುವ ಶಾಲೆಗೆ ಹೋಗುತ್ತಾನೆ. ಅವನು 2016ರಲ್ಲಿ 5ನೇ ತರಗತಿಯಲ್ಲಿದ್ದಾಗ ಅವನಿಗೂ ಸೊನ್ನೆ ಅಂಕ ಬಂದಿತ್ತು, 2017ರಲ್ಲಿ ಮತ್ತೊಮ್ಮೆ ಬರೆದ ಪರೀಕ್ಷೆಗಳಲ್ಲಿ ಅವನು ಏಳನೇ ತರಗತಿಯಲ್ಲಿದ್ದಾಗ ಮತ್ತೆ ಸೊನ್ನೆ ಅಂಕವನ್ನೇ ಪಡೆದ.

ಫಲಿತಗಳ ಬಗೆಗೆ ನಮ್ಮ ಪರ್ಯಾಲೋಚನೆಗಳು

ತಾಮಿಯಾ ಕಾಡಿನ ಒಂದು ಗುಡ್ಡಗಾಡು ಪ್ರದೇಶವಾಗಿದೆ. ಇಲ್ಲಿ ಹೆಚ್ಚಾಗಿ ಗೋಂಡ್ ಮತ್ತು ಭಾರಿಯಾ ಪಂಗಡಗಳ ಸಮುದಾಯದವರು ವಾಸಿಸುತ್ತಾರೆ. ಮೇಲಿನ ಉದಾಹರಣೆಯಲ್ಲಿ ನೋಡಿದ ಲಕ್ಷ್ಮಿಯಂತಹ ದೊಡ್ಡ ಸಂಖ್ಯೆಯ ಕುಟುಂಬಗಳು ಬಡ ಅಂಚಿನ ಕೃಷಿಕರದು. ಅವರ ಬದುಕು ಕೂಲಿ ಕೆಲಸಕ್ಕಾಗಿ ಕಾಲಕ್ಕೆ ತಕ್ಕಂತೆ ವಲಸೆ ಹೋಗುವುದರ ಮೇಲೆಯೇ ನಿಂತಿದೆ. ನಾವು ಈ ಹಿನ್ನೆಲೆಯ ಮಕ್ಕಳ ಸಾಧನೆಯನ್ನು ಗಮನಿಸುತ್ತಿದ್ದೇವೆ ಮತ್ತು , ಇದೇ ಸಾಮಾಜಿಕ – ಆರ್ಥಿಕ ಹಿನ್ನೆಲೆಯಲ್ಲಿನ ಕೆಲವು ಮಕ್ಕಳು ಉತ್ತಮ ಸಾಧನೆ ತೋರಿದ್ದರೂ, ಯಾರು ಕಲಿಕೆಯಲ್ಲಿ ಹೆಚ್ಚಿನ ಬದಲಾವಣೆ ತೋರಿಸುತ್ತಿಲ್ಲವೋ ಆ ಮಕ್ಕಳ ಮೇಲೆ ಗಮನ ನೀಡಿ ಪರಿಶೀಲಿಸುತ್ತಿದ್ದೇವೆ.

ಮತ್ತೊಂದೆಡೆ, ಇವರಿಗಿಂತಲೂ ಸ್ಥಿತಿವಂತರಾಗಿರುವ ಮತ್ತು ಸಾಮಾಜಿಕವಾಗಿ ಮೇಲಿರುವ ಕುಟುಂಬದ ಸುನಿಲ್‌ನಂತಹ ಇತರ ಮಕ್ಕಳು ಕೆಳಗಿನ ತರಗತಿಯ ಮಟ್ಟದ ಕಲಿಕೆಗಳೂ ಆಗಿರದ ಸುನೀಲ್‌ನಂತವರೂ ನಮಗೆ ಕಾಣ ಸಿಕ್ಕರು. ಕೆಲವು ಪ್ರಸಂಗಗಳಲ್ಲಿ ಅವರ ಒಡಹುಟ್ಟಿದವರೂ ಕೂಡ ಕಲಿಕೆಯಲ್ಲಿ ಕಷ್ಟಪಟ್ಟಿದ್ದರು. ಕೆಲವರು ಅವರು 7ನೇ ತರಗತಿಗೆ ಬರುವ ವೇಳೆಗೆ ಕಲಿಕೆಯಲ್ಲಿ ಪ್ರಗತಿ ಸಾಧಿಸಿದ್ದರಾದರೂ ಉಳಿದವರು ಹೆಚ್ಚೇನೂ ಪ್ರಗತಿ ಸಾಧಿಸಲಿಲ್ಲ. ಕೆಲವು ಪೋಷಕರು ತಮ್ಮ ಮಕ್ಕಳ ಕಲಿಕೆಯನ್ನು ಗಂಭೀರವಾಗಿ ಪರಿಗಣಿಸುತ್ತಿದ್ದರು ಮತ್ತು ಹತಾಶರಾದರು. ಆದರೆ ಎಲ್ಲದಕ್ಕೂ ಅವರು ಶಿಕ್ಷಕರನ್ನೇನೂ ದೂರುತ್ತಿರಲಿಲ್ಲ, ಕೆಲವು ಶಿಕ್ಷಕರನ್ನು ಅವರ ಪರಿಶ್ರಮಕ್ಕೆ ಗೌರವಿಸುತ್ತಿದ್ದರು ಕೂಡ. ಕೆಲವೆಡೆ ಕೆಲವು ಮನೆಗಳಲ್ಲಿ ಪೋಷಕರಿಬ್ಬರೂ ಪ್ರಾಥಮಿಕ ಹಂತದ ಶಿಕ್ಷಣ ಪಡೆದು, ಸರ್ಕಾರಿ ನೌಕರಿಯಲ್ಲೋ ಅಥವಾ ವ್ಯಾಪಾರದಲ್ಲೋ ತೊಡಗಿಕೊಂಡಿದ್ದರು, ಆದರೆ ಅವರಲ್ಲೂ ಕೆಲವು ಮಕ್ಕಳು ಸೊನ್ನೆ ಅಂಕ ಪಡೆದಿರುವುದನ್ನು ನಮ್ಮ ಎರಡು ವರ್ಷದ ಅಧ್ಯಯನದಲ್ಲಿ ಗಮನಿಸಿದೆವು.

ದತ್ತಾಂಶಗಳು ಮತ್ತು ವಿಷಯ ಅಧ್ಯಯನಗಳನ್ನು ಗಮನಿಸಿದಾಗ ನಾವು ಕಂಡುಕೊಂಡದ್ದೆಂದರೆ ಯಾವುದೇ ಗುಂಪಿನ ಮಕ್ಕಳ ಕಲಿಕೆಯಲ್ಲಿನ ಕಡಿಮೆ ಸಾಧನೆಗೆ ಯಾವುದೇ ರೀತಿಯ ಕಾರ್ಯಕಾರಿ ಸಂಬಂಧಗಳ ಮಾದರಿಯೇನೂ ಕಂಡು–ಬರುತ್ತಿರಲಿಲ್ಲ. ಯಾವುದೋ ಒಂದು ನಿರ್ದಿಷ್ಟ ಕಲಿಕಾ ನ್ಯೂನತೆಗಳು ಈ ಗುಂಪಿನಲ್ಲಿರುವ ಒಂದು ಸಾಧ್ಯತೆ ಇರಬಹುದೇನೋ ಎಂಬುದನ್ನು ನಾವು ಪರಿಗಣಿಸಿದೆವು. ನಾವು ಅಧ್ಯಯನ ಮಾಡಿದ ಕೆಲವು ಸಂಶೋಧನಾ ಲೇಖನಗಳೂ ನಮ್ಮ ಚಿಂತನೆಗೆ ಪುಷ್ಟಿ ನೀಡಿದವು. ಉದಾ: ನಿರ್ದಿಷ್ಟ ಕಲಿಕಾ ಕ್ಲಿಷ್ಟತೆಯ (ಎಸ್‌ಎಲ್‌ಡಿ) ಇರುವಿಕೆಯಲ್ಲಿ ಸಾಮಾಜಿಕ – ಆರ್ಥಿಕ ಹಿನ್ನೆಲೆಯು ಯಾವುದೇ ರೀತಿಯ ಪಾತ್ರವನ್ನೂ ವಹಿಸುವುದಿಲ್ಲ. ನಾವು ಗಮನಿಸಿದ ಇತರ ವಿಚಾರಗಳೆಂದರೆ:

- ನಿರ್ದಿಷ್ಟ ಕಲಿಕಾ ನ್ಯೂನತೆಗಳಿಗೆ ಕಾರಣವಾಗುವ ನರಸಂಬಂಧೀ ಸ್ಥಿತಿಯು ಸ್ವಲ್ಪಮಟ್ಟಿಗೆ ಕುಟುಂಬದಲ್ಲಿ ಹರಿಯಬಹುದು.
- ನಿರ್ದಿಷ್ಟ ಕಲಿಕಾ ಕ್ಲಿಷ್ಟತೆಗಳು ಇತರ ವಿಶೇಷ ಅಗತ್ಯಗಳೊಡನೆ ಸೇರಿಕೊಂಡಿರಬಹುದು ಉದಾ: ಅತಿ ಚಟುವಟಿಕೆ ಮತ್ತು ಗಮನದ ಕೊರತೆ
- ನಿರ್ದಿಷ್ಟ ಕಲಿಕಾ ಕ್ಲಿಷ್ಟತೆಗಳು ಮತ್ತು ಬುದ್ಧಿಮತ್ತೆ ಮಟ್ಟಕ್ಕೆ ಯಾವುದೇ ಸಂಬಂಧವಿರುವುದಿಲ್ಲ.
- ನಿರ್ದಿಷ್ಟ ಕಲಿಕಾ ಕ್ಲಿಷ್ಟತೆಗಳು ಕೆಲವು ಮಕ್ಕಳಲ್ಲಿ ಓದಲು–ಬರೆಯಲು ಕಷ್ಟಪಡುವುದರಲ್ಲಿ ಸವಾಲುಗಳಾಗಿ ತೋರಿಸಿ–ಕೊಳ್ಳಬಹುದು. ಆದರೆ, ಅಂಕಿಗಳ ಚಟುವಟಿಕೆ ಕಷ್ಟವಾಗದಿರ–ಬಹುದು, ಕೆಲವು ಮಕ್ಕಳಲ್ಲಿ ಇದರ ವಿರುದ್ಧವೂ ಆಗಬಹುದು ಮತ್ತೂ ಕೆಲವರಲ್ಲಿ ಒಟ್ಟಿಗೆ ಎರಡರಲ್ಲೂ ಕಷ್ಟವಿರಬಹುದು.

ಕಡಿಮೆ ಕಲಿಕಾ ಪ್ರಗತಿಯಿರುವ ವಿವಿಧ ಮಕ್ಕಳ ಕಲಿಕಾ ಕೇಂದ್ರಗಳಲ್ಲಿನ ಹಾಜರಾತಿಯು ಹೆಚ್ಚೂ ಇರಬಹುದು, ಕಡಿಮೆಯೂ ಇರಬಹುದು ಎಂಬುದನ್ನೂ ನಾವು ಮನಗಂಡೆವು.

ನಾವು ಎದುರಿಸುತ್ತಿರುವ ಸನ್ನಿವೇಶ ಮತ್ತು ಕಡಿಮೆ ತಿಳುವಳಿಕೆ ಇರುವಂತಹ ಪರಿಸ್ಥಿತಿಯಲ್ಲಿ ನಾವು ಯಾವ ಪಾತ್ರ ವಹಿಸಬಹುದೆಂಬುದು ನಮಗೆ ಸವಾಲಿನ ಪ್ರಶ್ನೆಯಾಗಿತ್ತು. 'ಏಕಲವ್ಯ'ದ ಕ್ಷೇತ್ರ ಮಟ್ಟದ ಕಾರ್ಯಕರ್ತರ ಪರಿಶ್ರಮವನ್ನು ಪೋಷಕರು ಗಮನಿಸುತ್ತಿದ್ದರು. ಮೆಚ್ಚುತ್ತಿದ್ದರಾದರೂ ಈ ಒಂದು ನಿರ್ದಿಷ್ಟ ವಿಷಯದಲ್ಲಿ ಸವಾಲನ್ನೆದುರಿಸುತ್ತಿರುವ ಮಕ್ಕಳ ಅಗತ್ಯಗಳಿಗೆ ಈ ಪರಿಶ್ರಮವನ್ನು ನಿರ್ದಿಷ್ಟವಾದ ರೀತಿಯಲ್ಲಿ ಸರಿ ಹೊಂದಿಸಬಹುದೇ? ನಿರ್ದಿಷ್ಟ ಕಲಿಕಾ ಕ್ಲಿಷ್ಟತೆಗಳ ಬಗೆಗೆ ನಾವು ಓದುತ್ತಿದ್ದಂತೆ, ಈ ನ್ಯೂನತೆಗಳನ್ನು ಖಚಿತವಾಗಿ ಪತ್ತೆ ಹಚ್ಚಲು ಸಾಧ್ಯವಾಗುವುದು ಮೆದುಳು ಪ್ರೌಢವಾಗುವ ಸುಮಾರು ಎಂಟು ವರ್ಷ ವಯಸ್ಸಿನ ನಂತರವೆ ಎಂದು ಅರಿತೆವು. ಮಧ್ಯಪ್ರವೇಶವು ಹೆಚ್ಚು ಫಲಪ್ರದವಾಗುವುದು ಈ ಮಾಗುವಿಕೆಗಿಂತ ಮುನ್ನವೇ ಬೋಧನಾ ವಿಧಾನದ ಮಧ್ಯಪ್ರವೇಶವು ನರಮಂಡಲದ ಸರಿಯಾದ ಒಗ್ಗುವಿಕೆಗಳನ್ನು ಬಲಪಡಿಸಿದರೆ ಮಾತ್ರ. ಮಾಗುವಿಕೆಯು ಪೂರ್ಣಗೊಂಡ ನಂತರದಲ್ಲಿ ಪ್ರಗತಿಯು ಅಸಾಧ್ಯವಲ್ಲವಾದರೂ ಕಠಿಣವೂ ಮತ್ತು ನಿಧಾನವೂ ಆಗುತ್ತದೆ.

ಈ ಪರ್ಯಾಲೋಚನೆಗಳಿಂದ ನಮ್ಮ ಸಾಮರ್ಥ್ಯಗಳನ್ನು ಮತ್ತು ಗಮನವನ್ನು ಮೊದಲ ವರ್ಷಗಳಿಗೇ ಅಂದರೆ ತರಗತಿ 1, 2 ಮತ್ತು 3 ಇವುಗಳಿಗೇ ನಾವು ಹೆಚ್ಚು ಒತ್ತು ನೀಡಬೇಕೆಂದು ಅರಿವಾಯಿತು. ನಾವು ನಡೆಸಿದ ಅಧ್ಯಯನದ ದತ್ತಾಂಶಗಳಿಂದ ಕೂಡ ಪ್ರಾರಂಭಿಕ ಹಂತದಲ್ಲಿಯೇ ನಡೆಸುವ ಮಧ್ಯಪ್ರವೇಶವು ಎಷ್ಟು ಮುಖ್ಯ ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಾಯಿತು. ಏಕಲವ್ಯದಿಂದ ತಮ್ಮ ಮೊದಲ ವರ್ಷದಲ್ಲಿಯೇ ಬೆಂಬಲವನ್ನು ಪಡೆದ ಮಕ್ಕಳು ಎಂಟು ವರ್ಷಕ್ಕಿಂತ ದೊಡ್ಡವರಾಗಿದ್ದು, ನಂತರದಲ್ಲಿ ಅಂದರೆ ತರಗತಿ 3, 4 ಮತ್ತು 5ರಲ್ಲಿ ಇದ್ದಾಗ ಬೆಂಬಲ ಪಡೆದವರಿಗಿಂತಲೂ ಉತ್ತಮ ಸಾಧನೆ ಮಾಡುವ ಸಾಧ್ಯತೆಗಳಿವೆ ಎಂದೂ ಇವು ತೋರಿದವು. ರಾಜಸ್ಥಾನದಲ್ಲಿನ ಆರ್ಗನೈಸೇಷನ್ ಆಫ್ಅರ್ಲಿ ಲಿಟರಸಿ ಪ್ರಮೋಷನ್ ಸಂಸ್ಥೆ ಮತ್ತಿತರ ಸಂಸ್ಥೆಗಳು ನಡೆಸಿದಂತಹ ಫಲಪ್ರದ ಯೋಜನೆಗಳನ್ನು ಗಮನಿಸಿದಾಗ ಪ್ರಾರಂಭಿಕ ಹಂತದಲ್ಲಿಯೇ ನಡೆಯುವ ಮಧ್ಯಪ್ರವೇಶವು ಅಕ್ಷರಜ್ಞಾನದ ಪಡೆಯುವಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದೂ ಕಂಡುಕೊಳ್ಳಲಾಯಿತು.

ನಮ್ಮ ಮಧ್ಯಪ್ರವೇಶಗಳನ್ನು ಮಾರ್ಪಡಿಸಿಕೊಳ್ಳುವುದು

ನಮ್ಮ ಕಲಿಕೆಗಳನ್ನು ಪರೀಕ್ಷಿಸಿಕೊಳ್ಳಲು ನಾವು ತಾಮಿಯಾ ಜಿಲ್ಲೆಯ 10 ಪ್ರಾಥಮಿಕ ಶಾಲೆಗಳಲ್ಲಿ ಪ್ರಯೋಗಾತ್ಮಕ ಯೋಜನೆಗಳನ್ನು ಹಮ್ಮಿಕೊಂಡೆವು. ಅದರಲ್ಲಿ:

- ಹತ್ತು ಕ್ಷೇತ್ರ ಕಾರ್ಯಕರ್ತರು ಕೇವಲ ಒಂದು ಮತ್ತು ಎರಡನೇ ತರಗತಿಯ ಮಕ್ಕಳೊಡನೆ ಮಾತ್ರ ಕೆಲಸ ಮಾಡುತ್ತಿದ್ದರು.

- ಒಂದು ಪದಗಳ ಗುಂಪಿನಿಂದ ಮತ್ತೊಂದು ಪದಗಳ ಗುಂಪಿಗೆ ವ್ಯವಸ್ಥಿತವಾಗಿ ಕರೆದುಕೊಂಡೊಯ್ಯುವಂತಹ ಯೋಜನಾ–ಬದ್ಧವಾದ ಅಕ್ಷರಜ್ಞಾನದ ರೀತಿಯನ್ನು ಬಳಸುತ್ತಾ; ಪದ್ಯಗಳು, ಕಥೆಗಳು, ಚಿತ್ರಪುಸ್ತಕಗಳು, ಚಿತ್ರಪಟಗಳು, ಫಲಕಗಳು, ಮೌಖಿಕ ಸಂವಾದಗಳು, ಚಿತ್ರ ಬರೆಯುವುದು ಮುಂತಾದ ಚಟುವಟಿಕೆಗಳೊಂದಿಗೆ ಈ ಕೆಲಸವನ್ನು ಶ್ರೀಮಂತ–ಗೊಳಿಸಲಾಯಿತು.

- ಕ್ಷೇತ್ರ ಕಾರ್ಯಕರ್ತರು ಧ್ವನಿವಿಜ್ಞಾನದ ಕಡೆಗೆ ಹೆಚ್ಚು ಗಮನ ನೀಡಿದರು. ಇದು ಧ್ವನಿಗಳನ್ನು ಬರಹದ ಚಿಹ್ನೆಗಳಿಗೆ ಹೊಂದಿಸುವುದಕ್ಕಿಂತ ಮುನ್ನ, ಮಾತು ಮತ್ತು ಕೇಳುವ ಮಟ್ಟದಲ್ಲಿ ಧ್ವನಿಗಳನ್ನು ಪ್ರಕ್ರಿಯೆಗೊಳಿಸುವಂತಹ ಚಟುವಟಿಕೆಗಳಾಗಿವೆ. ಮೊದಲು, ಕೊಟ್ಟ ಒಂದು ನಿರ್ದಿಷ್ಟ ಪದಕ್ಕೆ ಮಕ್ಕಳು ಪ್ರಾಸಬದ್ಧವಾದ ಹೆಚ್ಚಿನ ಪದಗಳನ್ನು ಹೇಳುವುದು (ಆಟ, ಊಟ, ಪಟ, ಲೋಟ), ಒಂದು ಪದವನ್ನು ಓದುವಾಗ ಒಂದೊಂದು ಅಕ್ಷರಕ್ಕೂ ಚಪ್ಪಾಳೆ ಹೊಡೆಯುವುದು ಮುಂತಾದ ಚಟುವಟಿಕೆಗಳನ್ನು ನಡೆಸಿದೆವು.

- ಕಾರ್ಯ ಹಾಳೆಗಳನ್ನು ವಿನ್ಯಾಸಗೊಳಿಸಲಾಯಿತು ಹಾಗೂ ತರಗತಿಗಳಲ್ಲಿ ಬಳಸಲಾಯಿತು. ಮಕ್ಕಳ ಮಾಪನವನ್ನು ಇವುಗಳ ಮೂಲಕ ಮಾಡಲಾಯಿತು.

ಆರು ತಿಂಗಳ ಕಾಲ ಕೆಲಸಗಳನ್ನು ಮುಂದುವರೆಸಿದಾಗ ನಾವು ಉತ್ತಮ ಫಲಿತಗಳನ್ನು ಕಂಡೆವು, ಮುಖ್ಯವಾಗಿ ಕ್ಷೇತ್ರ ಕಾರ್ಯಕರ್ತರು, ಕ್ಷೇತ್ರ ಶಿಕ್ಷಕರು ಈ ತಂತ್ರಗಳನ್ನು ಅರಿತುಕೊಂಡು ನಿರಂತರತೆಯನ್ನು ಎಲ್ಲಿ ಕಾಪಾಡಿಕೊಂಡರೋ ಅಲ್ಲಿ ಉತ್ತಮ ಫಲಿತಗಳನ್ನು ಗಮನಿಸಿದೆವು. ಈಗ ಒಂದು ಮತ್ತು ಎರಡನೇ ತರಗತಿಯಲ್ಲಿರುವ ಮಕ್ಕಳ ಮೌಲ್ಯಾಂಕನವನ್ನು ಮುಂದೆ ಅವರ ಮೂರನೇ ತರಗತಿಯ ಕೊನೆಯಲ್ಲಿ ಮಾಡಿದರೆ, ಅಂಕಗಳು ಖಂಡಿತವಾಗಿಯೂ 2019ರ ಕೊನೆಯ ರೇಖೆಯ ಅಂಕಗಳಿಗಿಂತ ಮೂರನೇ ತರಗತಿಯ ಅಂಕಗಳು ಉತ್ತಮವಾಗಿರುತ್ತವೆ ಎಂದು ಗೋಚರವಾಯಿತು. ಆದರೆ 2019ರ ಮಾರ್ಚ್‌ನಲ್ಲೇ ಯೋಜನೆಯು ಕೊನೆಗೊಂಡಿದ್ದರಿಂದ ಮುಂಬರಿಕೆಯು ಸಾಧ್ಯವಾಗಲಿಲ್ಲ.

ಕಡಿಮೆ ಸಮಯದಲ್ಲಿನ ಈ ಪುಟ್ಟ ಪ್ರಯೋಗದಿಂದ ನಮ್ಮ ತಂಡದ ಸದಸ್ಯರು ಧ್ವನಿ ವಿಜ್ಞಾನದ ಅರಿವಿನ ಚಟುವಟಿಕೆಗಳಲ್ಲಿ ಭಾಗವಹಿಸಲು ಕಷ್ಟಪಡುತ್ತಿದ್ದಾರೆ ಎಂದು ತಿಳಿದುಬಂದಿತು. ಇಲ್ಲಿ ಸಾಕಷ್ಟು ಬಹಳ ಮುಜುಗರ ಮತ್ತು ಹಿಂಜರಿಕೆ ಇದ್ದಿತು. ಇದು ನಮಗೆ ಮಕ್ಕಳು ಓದುವುದನ್ನು ಕಲಿಯಲು ಅಗತ್ಯವಾದ ಅಡಿಪಾಯ ಧ್ವನಿ ವಿಜ್ಞಾನ ಪ್ರಜ್ಞೆಯಾಗಿದೆ, ಇದು ಮಕ್ಕಳಿಗೆ ಓದಲು ಕಲಿಯುವಲ್ಲಿ ಅಡಿಪಾಯವನ್ನು ಹಾಕುತ್ತದೆ ಎನ್ನುವುದನ್ನು ತಿಳಿಸಿಕೊಟ್ಟಿತ್ತು. ಆದರೆ ಇದನ್ನು ನಾವು ಲಘುವಾಗಿ ಪರಿಗಣಿಸಿದ್ದೆವು, ಆದರೆ, ಇದನ್ನು ಪ್ರಕಟವಾಗಿ ಮುನ್ನೆಲೆಗೆ ತರಬೇಕಾಗಿತ್ತು ಎನ್ನುವುದನ್ನು. ಅರಿವಿಗೆ ಬರುವಂತೆ ಮಾಡಿತು.

ಇದರ ಜೊತೆಗೆ ನಿರ್ದಿಷ್ಟ ಕಲಿಕಾ ಅಗತ್ಯವಿರುವ ಮಕ್ಕಳಿಗೂ ಇದು ಬಹಳ ಸಹಾಯ ಮಾಡುವಲ್ಲಿ ಮಹತ್ವಪಡೆದಿದೆ. ಇದು ನಮ್ಮ ತರಬೇತಿ ಕಾರ್ಯಕ್ರಮಗಳು ಮತ್ತು ಸಾಮಗ್ರಿಗಳ ಅಭಿವೃದ್ಧಿ ಕಾರ್ಯಾಗಾರಗಳಲ್ಲಿ ಕಲಿಯಬೇಕಾದ ಮತು ಹಂಚಿಕೊಳ್ಳಬೇಕಾದ ಒಂದು ಪ್ರಮುಖ ವಿಷಯವಾಗಿದೆ.

ಮಧ್ಯಪ್ರದೇಶದ ಇತರ ಭಾಗಗಳಲ್ಲಿನ ಎಲ್ಲ ಮಕ್ಕಳಿಗೂ ಕಲಿಯಲು ಸಹಾಯ ಮಾಡುವ ನಮ್ಮ ಮುಂದಿನ ಕೆಲಸಗಳಲ್ಲಿ ತಾಮಿಯಾದಲ್ಲಿನ ಈ ಅನುಭವದ ಆಧಾರದಲ್ಲಿ ಕಲಿತದ್ದನ್ನು ಉಪಯೋಗಿಸುತ್ತಿದ್ದೇವೆ. ಈ ರೀತಿಯ ನಿರ್ದಿಷ್ಟ ಕಲಿಕಾ ಅಗತ್ಯಗಳ ಅಂಶಗಳೆಡೆಗೆ ನಮ್ಮ ತಂಡದ ಸದಸ್ಯರ ಯೋಚನಾ ಧಾಟಿಯನ್ನು ಬದಲು ಮಾಡುತ್ತಿದ್ದೇವೆ. ಅವರು ಕಲಿಕೆಯಲ್ಲಿ ಹಿಂದಿರುವ ಮಕ್ಕಳಲ್ಲಿ ತಾವು ಕಂಡದ್ದನ್ನು ಚರ್ಚಿಸಲು ಆರಂಭಿಸಿದ್ದಾರೆ. ಈಗ ಅವರು

ಕಲಿಕೆಯಲ್ಲಿ ಮಕ್ಕಳು ಕಷ್ಟಪಡುವುದಕ್ಕೆ ಮಕ್ಕಳ ಹಾಜರಾತಿ ಮತ್ತು ಕುಟುಂಬದ ಹಿನ್ನೆಲೆಯ ಆಧಾರದಲ್ಲಿಯೇ ನೋಡುವ ಹಳೆಯ ಚೌಕಟ್ಟನ್ನು ದಾಟಿ, ಪ್ರತಿ ಮಗುವಿನ ಕ್ಲಿಷ್ಟತೆಯನ್ನೂ ಪರಿಗಣಿಸುವ ಚೌಕಟ್ಟಿಗೆ ಮುಂದುವರೆದಿದ್ದೇವೆ. ಅವರು ವಿಷಯ ಅಧ್ಯಯನಗಳನ್ನು ಮಾಡಲು ಮತ್ತು ನಿರ್ದಿಷ್ಟ ಮಕ್ಕಳೊಡನೆ ಹೆಜ್ಜೆ ಹಾಕಲು ದಾರಿಗಳನ್ನು ಹುಡುಕುವಷ್ಟು ಅರಳಿದ್ದಾರೆ. ಉದಾಹರಣೆಗೆ ಒಬ್ಬ ಸದಸ್ಯರು ಮಕ್ಕಳ ಸ್ನೇಹಿತರ ಗುಂಪನ್ನು ಅಂದರೆ ಮಗುವಿನ ಓರಗೆಯವರನ್ನು ಒಳಗೊಂಡು ಪಾಠ ಮಾಡುವಿಕೆ ಪ್ರಕ್ರಿಯೆಯನ್ನು ಬಳಸಿ ಅದು ಫಲಿತಗಳನ್ನು ಕೊಟ್ಟಿರುವುದನ್ನು ಹಂಚಿಕೊಂಡರು.

ಸರ್ಕಾರಿ ಶಾಲಾ ಶಿಕ್ಷಕರು ಮತ್ತು ಕ್ಷೇತ್ರ ಕಾರ್ಯಕರ್ತರ ತಂಡಗಳೊಡನೆ ನಾವು ಕೆಲಸ ಮಾಡುವಾಗ ಧ್ವನಿ ಜ್ಞಾನದ ಬಗ್ಗೆ ತರಬೇತಿ ಮತ್ತು ವ್ಯವಸ್ಥಿತ ಅಕ್ಷರಜ್ಞಾನದ ಬಗೆಗಿನ ತರಬೇತಿಗಳು ಬಹಳ ಮುಖ್ಯವಾಗಿವೆ. ಈ ಕಾರ್ಯವು ಪ್ರತಿ ಮಗುವಿನ ಕಲಿಕೆಗೆ ಸಹಾಯವಾಗುವಂತೆ ಸಫಲತೆಯನ್ನು ನೀಡುತ್ತದೆ ಎಂದು ಆಶಿಸುತ್ತೇವೆ.

* ಮಕ್ಕಳ ಗುರುತುಗಳನ್ನು ಗೌಪ್ಯವಾಗಿಡಲು ಹೆಸರುಗಳನ್ನು ಬದಲಾಯಿಸಲಾಗಿದೆ.



ರಶ್ಮಿ ಪಲಿವಾಲ್ ೧೯೮೩ರಿಂದ ೨೦೧೯ರವರೆಗೆ ಹೋಶಂಗಾಬಾದ್‌ನಲ್ಲಿ 'ಏಕಲವ್ಯ'ದೊಡನೆ ಕೆಲಸ ಮಾಡಿದ್ದಾರೆ. ಅಲ್ಲಿ ಅವರು ಶಾಲೆಯ ಸಮಾಜ ವಿಜ್ಞಾನ ಮತ್ತು ಶಿಕ್ಷಕ ಶಿಕ್ಷಣದ ಪಠ್ಯಕ್ರಮಗಳ ರಚನೆಗೆ ಕೊಡುಗೆ ನೀಡಿದ್ದಾರೆ. 'ಏಕಲವ್ಯ'ದ ಪ್ರಕಟಣೆಯ ಕೆಲಸಗಳು ಹಾಗೂ ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳಲ್ಲಿನ ಪ್ರಾಥಮಿಕ ಶಿಕ್ಷಣವನ್ನು ಗಟ್ಟಿಗೊಳಿಸುವ ಯೋಜನೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರನ್ನು paliwal_rashmi@yahoo.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ದನ** । ಪರಿಶೀಲನೆ: **ಲತಾ ಕೆ.ಸಿ**